ಶ್ರೀ ಎಲ್.ಆರ್. ಶಿವರಾಮೇಗೌಡ: ಮಂತ್ರಿಗಳು ಕೊಟ್ಟ ಉತ್ತರ ತಮಗೆ ಸಮಾಧಾನವಾಗಿದ್ದರೆ ನಾನು ಕುಳಿತುಕೊಳ್ಳುತ್ತೇನೆ. 250 ರೂಪಾಯಿಗಳನ್ನು ಒಂದು ಬೋರ್ವೆಲ್ ರಿಪೇರಿಗೆ ಕೊಡುತ್ತೇವೆಂದರೆ ಹೇಗೆ? 500 ರೂಪಾಯಿಗಳನ್ನು ಖರ್ಚು ಮಾಡಿದರೂ ಇವತ್ತು ಒಂದು ಬೋರ್ವೆಲ್ ರಿಪೇರಿ ಮಾಡುವುದಕ್ಕಾಗುವುದಿಲ್ಲ, 250 ರೂಪಾಯಿಗಳನ್ನು ಕೊಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಅವರು ಹೇಳಿದ್ದಕ್ಕೆ ನಾವು ಕುಳಿತುಕೊಳ್ಳುವುದಾದರೆ ನಾವು ಏತಕ್ಕೆ ಇಲ್ಲಿ ಶಾಸಕಗಿರಿ ಮಾಡಬೇಕು?

ಅಧ್ಯಕ್ಷರು: ಹೆಚ್ಚಿಗೆ ಖರ್ಚು ಬಂದರೂ ಮಾಡುತ್ತೇವೆಂದು ಹೇಳಿದರಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ: ಯಾವಾಗ ಮಾಡುವುದು, ಸದನದಲ್ಲಿ ಉತ್ತರ ಕೊಡಲಿ.

ಅಧ್ಯಕ್ಷರು: ಈಗ ಸದ್ಯ ಮಾಡುವುದಕ್ಕಾಗುತ್ತದೆಯೆ?

ಶ್ರೀ ಎಂ.ವೈ. ಘೋರ್ಪಡೆ: ಇನ್ನಷ್ಟು ಹಣ ಕೊಡುವ ಅವಶ್ಯಕತೆ ಇದ್ದರೆ ಕೊಡುತ್ತೇವೆ. ಅದಕ್ಕೇನೂ ತೊಂದರೆ ಇಲ್ಲ. ಆದರೆ ಅದನ್ನು ಇಲ್ಲಿ ಹೇಳುವುದಕ್ಕಾಗುತ್ತದೆಯೇ? ಸಾವಿರ ರೂಪಾಯಿ ಮಾಡಿದ್ದೇವೆ, ಐನೂರು ರೂಪಾಯಿ ಮಾಡಿದ್ದೇವೆಂದು ಈಗಲೇ ಹೇಳುವುದಕ್ಕಾಗುತ್ತದೆಯೇ? ಇದ್ದ ಪರಿಸ್ಥಿತಿಯನ್ನು ಹೇಳಿದೆ. ರಿಪೇರಿಗೋಸ್ಕರ ಹಣ ಜಾಸ್ತಿ ಮಾಡುವ ಪ್ರಶ್ನೆ ಇದ್ದರೆ ಸಹಾನುಭೂತಿಯಿಂದ, ನಾವು ಪರಿಶೀಲನೆ ಮಾಡುತ್ತೇವೆ. ಇವತ್ತೇ ನಾನು ಅದನ್ನು ಅನೌನ್ಸ್ ಮಾಡುವುದಕ್ಕಾಗುವುದಿಲ್ಲ. ಹೆಚ್ಚಿಗೆ ಮಾಡಿ ಎಂಬ ಪ್ರಶ್ನೆ ಬಂದತಕ್ಷಣ ನಾನು ಹೇಳುವುದಕ್ಕಾಗುವುದಿಲ್ಲ.

(ಮೌನ್ಯ ಸದಸ್ಯರೊಬ್ಬರು ಮಾತನಾಡಲು ನಿಂತರು)

ಅಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಇದು ಪ್ರಶ್ನೋತ್ತರವೋ ಅಥವಾ ಏನು ಇದು? ನೀವು ಹೋಗಿ ಮಾನ್ಯ ಮಂತ್ರಿಗಳನ್ನು ಭೇಟಿಯಾಗಿ.

ರಾಜ್ಯದಲ್ಲಿ ರಾಸಾಯನಿಕ ಗೊಬ್ಬರದ ವಿತರಣೆಯಲ್ಲಿ ಅವ್ಯವಹಾರ

522 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಲದಿಂದ ವಿತರಣೆ ಮಾಡಲಾಗುತ್ತಿರುವ ಸಾರಜನಕ ಗೊಬ್ಬರಗಳು ಸರಿಯಾಗಿ ವಿತರಣೆಯಾಗದೆ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಇದ್ದಲ್ಲಿ ಅದರ ವಿವರಗಳೇನು ಹಾಗೂ ಮುಂದೆ ಈ ರೀತಿ ಆಗದಂತೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಆರ್.ಎನ್. ನಾಯಕ್ (ಶ್ರೀಮತಿ ದಮಯಂತಿ ಬೋರೇಗೌಡರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಚಿಕ್ಕದಾದ ಮತ್ತು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ. ಸಾರ್ವಜನಿಕ ಗೊಬ್ಬರ ಸರಿಯಾಗಿ ವಿತರಣೆಯಾಗದೆ ಅವ್ಯವಹಾರ ಆಗಿರುವುದರ ಬಗ್ಗೆ ಈ ಹಿಂದೆ ಸಾರ್ವಜನಿಕರಿಂದ ಮಾನ್ಯ ಮಂತ್ರಿಗಳಿಗೆ ಅಥವಾ ಅವರ ಅಧಿಕಾರಿಗಳಿಗೆ ದೂರು ಬಂದಿದೆಯೆ? ಬಂದಿದ್ದರೆ ಎಷ್ಟು ದೂರುಗಳು ಬಂದಿವೆ? ಆ ದೂರುಗಳ ಬಗ್ಗೆ ಏನೇನು ಕ್ರಮ ತೆಗದುಕೊಂಡಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಸರ್ಕಾರಕ್ಕೆ ಗೊತ್ತಿರುವ ಹಾಗೆ ಈ ವ್ಯವಹಾರ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಆಗಿಲ್ಲ. ನನಗೆ ತಿಳಿದ ಮಟ್ಟಿಗೆ ಈ ತರಹ ವ್ಯವಹಾರ ನಡೆಯಲಾರದೆಂಬ ಭರವಸೆ ಇದೆ. ಅಂಥದ್ದು ಏನಾದರೂ ಇದ್ದರೆ ಅದನ್ನು ವಿಚಾರಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ಎನ್. ನಾಯಕ್: ಈ ಕರ್ನಾಟಕ ರಾಜ್ಯದಲ್ಲಿ ಈ ಸಹಕಾರ ಮಾರಾಟ ಮಹಾಮಂಡಲದಿಂದ ಗೊಬ್ಬರ ವಿತರಣೆ ಮಾಡುವುದರಲ್ಲಿ ತಪ್ಪಾಗಿದೆ ಎಂದು ತಮಗೆ ಸಾರ್ವಜನಿಕರಿಂದ ಎಷ್ಟು ದೂರುಗಳು ಇಲ್ಲಿಯವರೆಗೆ ಬಂದಿದ್ದವು? ಆ ತರಹ ಬಂದಿದ್ದರೆ ತಾವು ಆ ದೂರುಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ ಹೇಗೆ? ಅಥವಾ ನಿಮ್ಮ ಅಧಿಕಾರಿಗಳಿಗೆ ದೂರು ಏನಾದರೂ ಬಂದಿತ್ತೋ? ಬಂದಿದ್ದರೆ ಅದರ ಮೇಲೆ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ದೂರುಗಳು ನನಗೆ ಸಾಮಾನ್ಯವಾಗಿ ಬರಬಹುದು. ಆದರೆ ಈ ಸಂದರ್ಭದಲ್ಲಿ ಅದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಇದನ್ನು ವಿಚಾರಣೆ ಮಾಡಿ ಅದರಲ್ಲಿ ಸತ್ಯಾಂಶ ಇರುವ ಹಾಗೆ ಕಂಡುಬಂದರೆ ಮುಂದಿನ ಕ್ರಮವನ್ನು ಖಂಡಿತವಾಗಿ ನಾವು ತೆಗೆದುಕೊಳ್ಳುತ್ತೇವೆ. ಇಂಥ ವ್ಯವಹಾರಗಳು ಪಡೆಯದಿರುವ ಹಾಗೆ ಸರ್ವಪ್ರಯತ್ನವನ್ನೂ ನಾನು ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್: ಈಗ ತಮ್ಮ ಉತ್ತರದಿಂದ ತಮಗೆ ದೂರುಗಳು ಬಂದಿದೆಯೋ ಹೇಗೆ ಎಂಬ ಪರಿಚಯ ಇದ್ದ ಹಾಗೆ ಇಲ್ಲ. ದಯಮಾಡಿ ನೆನೆಪು ಮಾಡಿಕೊಳ್ಳಿ, ತಮಗೇನಾದರೂ ಗೊಬ್ಬರ ಅವ್ಯವಹಾರ ಬಗ್ಗೆ ದೂರುಗಳು ಬಂದಿದ್ದಾವೋ ಹೇಗೆ? ನಿಮಗೆ ಅಥವಾ ನಿಮ್ಮ ಅಧಿಕಾರಿಗಳಿಗೆ ದೂರುಗಳು ಬಂದಿದೆಯೋ ಹೇಗೆ? ದೂರುಗಳು ಬಂದಿದ್ದರೆ ಆ ದೂರುಗಳ ಬಗ್ಗೆ ಈ ತನಕ ಏನಾದರೂ ವಿಚಾರಣೆ ಮಾಡಿದ್ದಾರೋ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಆಗಲೇ ನಾನು ಹೇಳಿದೆ. ದೂರುಗಳು ಬಂದರೆ ಕೂಡಲೇ ಅದನ್ನು ವಿಚಾರಣೆ ಮಾಡಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಆ ವಿಷಯಾಡೆಲ್ಲಾ ಇವತ್ತಿರತಕ್ಕ ಕ್ರಮದಲ್ಲಿದೆ. ಅದಷ್ಟೇ ಅಲ್ಲದೆ, ಕೂಡಲೇ ಅವ್ಯವಹಾರ ಮಾಡತಕ್ಕವರಿಂದ ಈ ವ್ಯವಹಾರವನ್ನು ಕೈತಪ್ಪಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಕೂಡ ಇದೆ. ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯದಲ್ಲಿ ಅನುಮಾನ ಪಡಬೇಕಾಗಿಲ್ಲ. ಅಂಥದ್ದೇನಾದರೂ ಇದ್ದರೆ ನನಗೆ ತಿಳಿಸಿ. ಆದಷ್ಟು ಬೇಗ ಮುಂದಿನ ಕ್ರಮ ತೆಗೆದುಕೊಂಡು ಸಮಾಧಾನಕರವಾದ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಲಕ್ಷ್ಮಣ್ಣನವರೇ, ತಮ್ಮ ಪ್ರಶ್ನೆಯನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿದೆ. ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಕುಡಿಯುವ ನೀರು ಹಾಗೂ ಗ್ರಾಮ ನೈರ್ಮಲ್ಯ ಯೋಜನೆ

554 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ಷ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಹಾಗೂ ಗ್ರಾಮ ನೈರ್ಮಲ್ಯದ ಬಗ್ಗೆ ಯೋಜನೆಯನ್ನು ಏನಾದರೂ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವ ಜಿಲ್ಲೆಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರುತ್ತದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು